

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 28-06-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಝೈದ್ ಬಿನ್ ಹಾರಿಸ(ರ)ರಿಗೆ ಸಂಬಂಧಿಸಿ ಇನ್ನಷ್ಟು ಘಟನೆಗಳು ಮತ್ತು ಉಲ್ಲೇಖಗಳು ಇವೆ. ಅವುಗಳನ್ನು ನಾನು ಈ ದಿನ ನಿಮ್ಮ ಮುಂದೆ ಇರಿಸುವೆನು. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಿಜರಿ ವರ್ಷ 6 ರಬೀಉಲ್ ಆಖಿರ್ ತಿಂಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದ್ ಬಿನ್ ಹಾರಿಸರ ನೇತೃತ್ವದಲ್ಲಿ ಮುಸ್ಲಿಮರ ಒಂದು ತಂಡವನ್ನು ಬನೀ ಸಲೀಮ್ ಗೋತ್ರದವರ ಕಡೆಗೆ ಕಳುಹಿಸಿದರು. ಈ ಗೋತ್ರವು ನಜ್ದ್ ಪ್ರದೇಶದ ಜಮೂಮ್ ಎಂಬಲ್ಲಿ ವಾಸಿಸುತ್ತಿತ್ತು. ಈ ಗೋತ್ರದ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಕೆಲವು ಕಾಲದಿಂದ ವರ್ತಿಸುತ್ತಿದ್ದರು. ಝೈದ್ ಬಿನ್ ಹಾರಿಸ(ರ) ಈ ಅಭಿಯಾನದಿಂದ ಮರಳಿ ಬಂದ ನಂತರ ಹೆಚ್ಚು ಸಮಯ ದಾಟುವ ಮೊದಲೇ ಜಮಾದಿಲ್ ಅವ್ವಲ್ ತಿಂಗಳಲ್ಲಿ ಒಂದುನೂರ ಎಪ್ಪತ್ತು ಸಹಾಬರ ಮೇಲೆ ನೇತೃತ್ವ ನೀಡಿ ಪುನಃ ಮದೀನದಿಂದ ಹೊರಗೆ ಕಳುಹಿಸಲ್ಪಟ್ಟರು. ಇದಕ್ಕೆ ಕಾರಣವಾಗಿ ಜೀವನ ಚರಿತ್ರೆಗಾರರು ಹೀಗೆ ಬರೆದಿದ್ದಾರೆ: ಸಿರಿಯಾ ದೇಶದಿಂದ ಮಕ್ಕದ ಖುರೈಶಿಗಳ ಒಂದು ವ್ಯಾಪಾರಿ ತಂಡ ಆಗಮಿಸುತ್ತಾ ಇತ್ತು. ಅವರನ್ನು ತಡೆಯಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ದಳವನ್ನು ಕಳುಹಿಸಿದ್ದರು.

ಇಲ್ಲಿ ಒಂದು ವಿಷಯ ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ, ಖುರೈಶಿಗಳ ವ್ಯಾಪಾರ ತಂಡಗಳು ಯಾವಾಗಲೂ ಆಯುಧಗಳಿಂದ ಸುಸಜ್ಜಿತವಾಗಿರುತ್ತಿದ್ದುವು. ಅವರು ಸಿರಿಯಾ ಮತ್ತು ಮಕ್ಕದ ಮಧ್ಯೆ ಸಂಚರಿಸುವಾಗ ಮದೀನಕ್ಕೆ ಬಹಳ ಸಮೀಪವಾಗಿ ಸಾಗುತ್ತಿದ್ದರು. ಆದುದರಿಂದ ಪ್ರತಿಸಮಯ ಅವರಿಂದ ಅಪಾಯದ ಸಾಧ್ಯತೆಗಳಿದ್ದುವು. ಇದು ಮಾತ್ರವಲ್ಲ ಈ ವ್ಯಾಪಾರಿ ತಂಡ ದಾಟಿ ಹೋಗುವಲ್ಲೆಲ್ಲ ಅರಬಿ ಗೋತ್ರಗಳನ್ನು ಮುಸ್ಲಿಮರ ವಿರುದ್ಧ ಉದ್ರೇಕಿಸುತ್ತಾ ಇದ್ದರು. ಆ ಕಾರಣದಿಂದ ದೇಶದಲ್ಲಿಡೀ ಮುಸ್ಲಿಮರ ವಿರುದ್ಧ ಹಗೆತನದ ಒಂದು ಅಪಾಯಕಾರಿ ಅಗ್ನಿ ಪ್ರಜ್ವಲಿಸಲ್ಪಟ್ಟಿತ್ತು. ಆದುದರಿಂದ ವ್ಯಾಪಾರಿ ತಂಡಗಳನ್ನು ತಡೆಗಟ್ಟುವುದು ಆವಶ್ಯಕವಾಗಿತ್ತು. ವ್ಯಾಪಾರಿ ತಂಡ ಆಗಮಿಸಲಿರುವ ಸಮಾಚಾರ ಗಳಿಸಿದಾಗ ಝೈದ್ ಬಿನ್ ಹಾರಿಸರ ನೇತೃತ್ವದಲ್ಲಿ ಒಂದು ದಳವನ್ನು ರವಾನಿಸಲಾಯಿತು. ಅವರು ಜಾಗರೂಕತೆಯಿಂದ ಅವಿತುಕೊಂಡು ಮುಂದೆ ಸಾಗಿದರು. ಯಾರಿಗೂ ತಮ್ಮ ಸಂಚಾರದ ಬಗ್ಗೆ ತಿಳಿಯದಂತೆ ನೋಡಿಕೊಂಡರು. ಈಸ್ ಎಂಬ ಸ್ಥಳದಲ್ಲಿ ಈ ದಳದವರು ವ್ಯಾಪಾರ ತಂಡವನ್ನು ಹಿಡಿಗೂಡಿದರು. ಈಸ್ ಎಂಬ ಸ್ಥಳ ಮದೀನದಿಂದ ನಾಲ್ಕು ದಿನಗಳ ಸಂಚಾರದ ದೂರದಲ್ಲಿ ಸಮುದ್ರ ಕರವಾಳಿಗೆ ಸಮೀಪವಾಗಿ ಇದೆ. ಅಚಾನಕವಾಗಿ ಆಕ್ರಮಣ ಮಾಡಿದ ಕಾರಣ ಮಕ್ಕದ ವ್ಯಾಪಾರಿ ತಂಡದವರು ಮುಸ್ಲಿಮರ ಆಕ್ರಮಣವನ್ನು ಎದುರಿಸಲಾಗದೆ ತಮ್ಮ ಸರಕುಗಳನ್ನು ಬಿಟ್ಟು ಓಡಿ ಹೋದರು. ಹಝ್ರತ್ ಝೈದ್ ಬಿನ್ ಹಾರಿಸ(ರ) ಕೆಲವರನ್ನು ಬಂಧಿಸಿ ಸರಕುಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಮದೀನದ ಕಡೆಗೆ ಮರಳಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾದರು.

ಹಿಜರಿ ವರ್ಷ 6 ಜಮಾದಿಲ್ ಆಖಿರ್ ತಿಂಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದ್ ಬಿನ್ ಹಾರಿಸರ ನೇತೃತ್ವದಲ್ಲಿ ಹದಿನೈದು ಸಹಾಬರ ಒಂದು ದಳವನ್ನು ಮಖಾಮ್ ಎಂಬಲ್ಲಿಗೆ ಕಳುಹಿಸಿದರು. ಆ ಸ್ಥಳ ಮದೀನದಿಂದ 36 ಮೈಲು ದೂರದಲ್ಲಿದ್ದು ಆ ಕಾಲದಲ್ಲಿ ಅಲ್ಲಿ ಬನೂ ಸಅಲಬ ಗೋತ್ರದ ಜನರು ವಾಸಿಸುತ್ತಿದ್ದರು. ಆದರೆ ಝೈದ್ ಬಿನ್ ಹಾರಿಸ ಅಲ್ಲಿಗೆ ತಲಪುವ ಮೊದಲೇ ಆ ಬಗ್ಗೆ ಸಮಾಚಾರ ಗಳಿಸಿದ ಆ ಗೋತ್ರದ ಜನರು ಅಲ್ಲಿಂದ ಅತ್ತಿತ್ತ ಚದುರಿ ಹೋದರು.

ಇನ್ನೊಂದು ಘಟನೆ, ಝೈದ್ ಬಿನ್ ಹಾರಿಸರನ್ನು ಹಿಜರಿ 6 ಜಮಾದಿಲ್ ಆಖಿರ್ ತಿಂಗಳಲ್ಲಿ ಹಿಸ್ಮಾ ಎಂಬಲ್ಲಿಗೆ ಐನೂರು ಜನರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧ ಮಾಡಲು ಕಳುಹಿಸಿದರು. ಆ ಸ್ಥಳ ಮದೀನದ ಉತ್ತರ ದಿಕ್ಕಿನಲ್ಲಿ ಬನೂ ಜಿಝಾಮ್ ಗೋತ್ರದ ವಾಸ ಸ್ಥಳವಾಗಿತ್ತು. ಹೀಗೆ ಕಳುಹಿಸಲು ಕಾರಣವೇನೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿ ದಿಹ್ಯ ಕಲ್‌ಬಿ ಸಿರಿಯಾದಲ್ಲಿ ರೂಮಿನ ಖೈಸರನನ್ನು ಭೇಟಿಯಾಗಿ ಮರಳಿ ಬರುವಾಗ ಬನೂ ಜಿಝಾಮ್ ಗೋತ್ರದವರ ಪ್ರದೇಶವನ್ನು ದಾಟಿ ಬರುವಾಗ ಆ ಗೋತ್ರದ ಮುಖಂಡ ಹನೀದ್ ಬಿನ್ ಆದಿಝ್ ತನ್ನ ಸಂಗಡಿಗರೊಂದಿಗೆ ಅವರನ್ನು ಆಕ್ರಮಿಸಿದ್ದನು. ಅವರ ಬಳಿ ಇದ್ದ ಎಲ್ಲಾ ಸಾಮಗ್ರಿಗಳನ್ನು ಕಿತ್ತುಕೊಂಡನಲ್ಲದೆ, ಖೈಸರ್ ಪಾರಿತೋಷಿಕವಾಗಿ ಕೊಟ್ಟದ್ದನ್ನೂ ಕಿತ್ತುಕೊಂಡನು. ದಿಹ್ಯ ಮದೀನಕ್ಕೆ ತಲಪಿ ಎಲ್ಲಾ ವಿಷಯವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದ್ ಬಿನ್ ಹಾರಿಸರನ್ನು ಕಳುಹಿಸಿದರು. ದಿಹ್ಯ ಸಹ ಅವರೊಂದಿಗಿದ್ದರು. ಝೈದರ ಸೇನಾದಳ ಬಹಳ ಜಾಗರೂಕತೆಯಿಂದ ಹಗಲು ಅವಿತುಕೊಂಡು ರಾತ್ರಿ ಸಂಚರಿಸುತ್ತಾ ಮುಂದೆ ಸಾಗಿತು. ಮುಂಜಾನೆ ಬನೂ ಜಿಝಾಮ್ ಗೋತ್ರದವರನ್ನು ಆಕ್ರಮಿಸಿತು. ಬನೂ ಜಿಝಾಮ್ ಗೋತ್ರದವರು ಪ್ರತ್ಯಾಕ್ರಮಣ ಮಾಡಿದರು. ಯುದ್ಧ ನಡೆಯಿತು. ಆದರೆ ಮುಸ್ಲಿಮರ ಅಚಾನಕ ಆಕ್ರಮಣವನ್ನು ಅವರಿಗೆ ಎದುರಿಸಲಾಗಲಿಲ್ಲ. ಸ್ವಲ್ಪ ಸಮಯ ಹೋರಾಡಿ ಅವರು ಓಡಿ ಹೋದರು. ಮುಸ್ಲಿಮರು ಜಯಗಳಿಸಿದರು. ಝೈದ್ ಬಿನ್

ಹಾರಿಸ ಬಹಳ ಸಾಮಗ್ರಿಗಳೊಂದಿಗೆ ಮತ್ತು ಜಾನುವಾರುಗಳೊಂದಿಗೆ ಅಂದಾಜು ಒಂದು ನೂರು ಜನರನ್ನು ಸೆರೆಹಿಡಿದು ಮರಳಿ ಬಂದರು. ಈ ಯುದ್ಧ ಸಂಭವಿಸಿದ ನಂತರ ಒಂದು ತಿಂಗಳು ದಾಟಿ ಹೋದಾಗ ಝೈದ್ ಬಿನ್ ಹಾರಿಸರನ್ನು ವಾದಿಯುಲ್ ಖುರಾ ಕಡೆಗೆ ಸೇನಾದಳದೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸಿದರು. ಅಲ್ಲಿ ನಡೆದ ಯುದ್ಧದಲ್ಲಿ ಅನೇಕ ಮುಸ್ಲಿಮರು ಶಹೀದರಾದರು. ಝೈದ್ ಸಹ ಗಾಯಗೊಂಡರು. ಆದರೆ ಅಲ್ಲಾಹನ ಅನುಗ್ರಹದಿಂದ ರಕ್ಷಿಸಲ್ಪಟ್ಟರು.

ಹಿಜರಿ ವರ್ಷ 8 ಜಮಾದಿಲ್ ಅವ್ವಲ್ ತಿಂಗಳಲ್ಲಿ ಮೂತ ಯುದ್ಧ ಸಂಭವಿಸಿತು. ಹಝ್ರತ್ ಅಬ್ದುಲ್ಲ ಬಿನ್ ಉಮರ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದ್ ಬಿನ್ ಹಾರಿಸರನ್ನು ಮೂತ ಯುದ್ಧದ ಸೇನೆಯ ಅಮೀರರನ್ನಾಗಿ ನೇಮಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಝೈದ್ ಶಹೀದರಾದರೆ ಜಅಫರ್ ಅಮೀರ್ ಆಗುವರು. ಜಅಫರ್ ಸಹ ಶಹೀದರಾದರೆ ಅಬ್ದುಲ್ಲಾ ಬಿನ್ ರವಾಹ ನಿಮ್ಮ ಅಮೀರ್ ಆಗುವರು. ಒಬ್ಬ ಯಹೂದಿ ಈ ಮಾತುಗಳನ್ನು ಆಲಿಸಿದನು. ಅವನು ಹಝ್ರತ್ ಝೈದ್ ಬಳಿಗೆ ಬಂದು ಹೇಳಿದನು: ನಿಮ್ಮ ರಸೂಲ್ ಸತ್ಯವಂತನಾಗಿದ್ದರೆ ನೀನು ಜೀವಂತವಾಗಿ ಮರಳಿ ಬರಲಾರೆ. ಹಝ್ರತ್ ಝೈದ್ ಹೇಳಿದರು: ನಾನು ಜೀವಂತವಾಗಿ ಮರಳಿ ಬಂದರೂ ಮರಳಿ ಬಾರದೆ ಇದ್ದರೂ ನಮ್ಮ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸತ್ಯವಂತರಾದ ರಸೂಲರೇ ಆಗಿದ್ದಾರೆ. ಅಲ್ಲಾಹನ ವಿಧಿ ಪ್ರಕಾರ ಸಂಭವಿಸಿತು. ಹಝ್ರತ್ ಝೈದ್ ಶಹೀದರಾದರು. ಅನಂತರ ಹಝ್ರತ್ ಜಅಫರ್ ಸೈನ್ಯದ ನೇತೃತ್ವ ವಹಿಸಿದರು. ಅವರು ಸಹ ಶಹೀದರಾದರು. ಅನಂತರ ಹಝ್ರತ್ ಅಬ್ದುಲ್ಲಾ ಬಿನ್ ರವಾಹ ಸೈನ್ಯದ ನಾಯಕರಾದರು. ಅವರು ಸಹ ಶಹೀದರಾದರು. ಆಗ ಸೈನ್ಯದಲ್ಲಿ ಗಾಬರಿ ಹರಡುವ ಸಾಧ್ಯತೆ ಇತ್ತು. ಆಗ ಹಝ್ರತ್ ಖಾಲಿದ್ ಬಿನ್ ವಲೀದ್ ಮುಸ್ಲಿಮರ ಅಪೇಕ್ಷೆ ಪ್ರಕಾರ ಪತಾಕೆ ಎತ್ತಿಕೊಂಡರು. ಅಲ್ಲಾಹನು ಅವರ ಮೂಲಕ ಮುಸ್ಲಿಮರಿಗೆ ಜಯವನ್ನು ದಯಪಾಲಿಸಿದನು. ಅವರು ಸೈನ್ಯವನ್ನು ಸುರಕ್ಷಿತವಾಗಿ ಮರಳಿ ತಂದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮೂವರು ಶಹೀದರಾದ ಸಮಾಚಾರ ದೊರೆತಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎದ್ದು ನಿಂತು ಹೇಳಿದರು: ಓ ಅಲ್ಲಾಹ್ ಝೈದನಿಗೆ ಮಗ್‌ಫಿರತ್ ದಯಪಾಲಿಸು. ಓ ಅಲ್ಲಾಹ್ ಝೈದನಿಗೆ ಮಗ್‌ಫಿರತ್ ದಯಪಾಲಿಸು. ಓ ಅಲ್ಲಾಹ್ ಝೈದನಿಗೆ ಮಗ್‌ಫಿರತ್ ದಯಪಾಲಿಸು. ಓ ಅಲ್ಲಾಹ್ ಜಅಫರ್ ಮತ್ತು ಅಬ್ದುಲ್ಲಾ ಬಿನ್ ರವಾಹರಿಗೆ ಮಗ್‌ಫಿರತ್ ದಯಪಾಲಿಸು ಎಂದು ಪ್ರಾರ್ಥಿಸಿದರು. ತಬಖಾತುಲ್ ಕುಬ್ರಾ ಎಂಬ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಝೈದ್ ಶಹೀದರಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝೈದ್‌ರ ಕುಟುಂಬದವರಿಗೆ ಸಂತಾಪ ಸೂಚಿಸಲು ಹೋದಾಗ ಝೈದರ ಪುತ್ರಿ ಅಳುತ್ತಿರುವುದಾಗಿ ಕಂಡರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಣ್ಣುಗಳಿಂದ ಸಹ ಅಶ್ರುಧಾರೆ ಸುರಿಯಿತು. ಶಹಾದತ್ ಸಮಯ ಝೈದರ ಪ್ರಾಯ 55 ವರ್ಷ ಆಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝೈದರ ನಮಾಝೆ ಜನಾಝ ನಿರ್ವಹಿಸಿ ಹೇಳಿದರು: ಝೈದರಿಗೋಸ್ಕರ ಮಗ್‌ಫಿರತ್ ಬೇಡಿಕೊಳ್ಳಿರಿ. ಅವರು ಸ್ವರ್ಗಕ್ಕೆ ಓಡುತ್ತಾ ಪ್ರವೇಶಿಸಿರುವರು.

ಹಝ್ರತ್ ಜಬಲ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದಾದರೂ ಯುದ್ಧಕ್ಕೆ ಸ್ವತಃ ಹೋಗದೆ ಇರುವಾಗ ತಮ್ಮ ಆಯುಧಗಳನ್ನು ಹಝ್ರತ್ ಅಲಿ ಅಥವಾ ಹಝ್ರತ್ ಝೈದರ ಹೊರತು ಬೇರೆ ಯಾರಿಗೂ ಕೊಡುತ್ತಿರಲಿಲ್ಲ. ಹಝ್ರತ್ ಜಬಲರ ಇನ್ನೊಂದು ವರದಿ ಹೀಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎರಡು ಕುಜಾವಗಳು (ಒಂಟೆಯ ಮೇಲೆ ಕುಳಿತುಕೊಳ್ಳಲು ಬಳಸುವ ಪೀಠ) ಪಾರಿತೋಷಿಕವಾಗಿ ನೀಡಲ್ಪಟ್ಟಾಗ ಅದರಲ್ಲಿ ಒಂದನ್ನು ತಾನು ತೆಗೆದುಕೊಂಡು ಇನ್ನೊಂದನ್ನು ಹಝ್ರತ್ ಝೈದರಿಗೆ ಕೊಟ್ಟರು. ಹಝ್ರತ್ ಜಬಲ ಇನ್ನೊಂದು ವರದಿಯಲ್ಲಿ ಹೀಗೆ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎರಡು ನಿಲುವಂಗಿಗಳನ್ನು ಪಾರಿತೋಷಿಕವಾಗಿ ನೀಡಿದಾಗ ಅದರಲ್ಲಿ ಒಂದನ್ನು ತಮಗಾಗಿ ಇರಿಸಿ ಇನ್ನೊಂದನ್ನು ಹಝ್ರತ್ ಝೈದರಿಗೆ ಕೊಟ್ಟರು. ಇನ್ನೊಂದು ವರದಿ ಪ್ರಕಾರ, ಹಝ್ರತ್ ಝೈದ್ ಬಿನ್ ಹಾರಿಸ(ರ) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಹಿಬ್ಬ್ (ಪ್ರೀತಿಸುವವ) ಎಂದು ಕರೆಯಲ್ಪಡುತ್ತಿದ್ದರು. ಹಝ್ರತ್ ಝೈದ್ ಬಗ್ಗೆ ಹಝ್ರತ್ ನಬಿ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಜನರ ಪೈಕಿ ಎಲ್ಲರಿಗಿಂತ ನನಗೆ ಪ್ರಿಯನಾದವನು ಅಲ್ಲಾಹನ ಅನುಗ್ರಹಗಳಿಗೆ ಪಾತ್ರನಾದ ಝೈದ್ ಆಗಿದ್ದಾನೆ.

ಹಿಜರಿ ವರ್ಷ 11 ಸಫರ್ ತಿಂಗಳಲ್ಲಿ ಒಂದು ದೊಡ್ಡ ಸೈನ್ಯವನ್ನು ಮೂತ ಯುದ್ಧಕ್ಕೆ ಸಂಬಂಧಿಸಿ ಪ್ರತೀಕಾರ ಮಾಡಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಿದ್ಧಪಡಿಸಿ ಉಸಾಮ ಬಿನ್ ಝೈದರನ್ನು ಕರೆದು ಆ ಸೈನ್ಯದ ನೇತೃತ್ವವನ್ನು ಅವರಿಗೆ ನೀಡಿ ಹೇಳಿದರು: ನಿನ್ನ ಪಿತ ಶಹೀದರಾದ ಸ್ಥಳದ ಕಡೆಗೆ ವೇಗವಾಗಿ ಹೋಗು. ಶತ್ರುಗಳಿಗೆ ಸಮಾಚಾರ ತಲಪುವ ಮೊದಲೇ ಅಲ್ಲಿಗೆ ತಲಪು. ಬೆಳಗಾಗುತ್ತಲೇ ಆಕ್ರಮಣ ಮಾಡು. ಹಝ್ರತ್ ಝೈದರ ಪರವಾಗಿ ಪ್ರತೀಕಾರ ಮಾಡುತ್ತಾ ಆ ಸ್ಥಳಗಳನ್ನು ನಿನ್ನ ಕುದುರೆಗಳ ಮೂಲಕ ತುಳಿದು ಹಾಕು. ನಿನ್ನೊಂದಿಗೆ ಮಾರ್ಗ ತೋರಿಸುವವರನ್ನೂ ಕರೆದುಕೊಂಡು ಹೋಗು. ಅಲ್ಲಿನ ಸಮಾಚಾರ ದೊರಕಲು ಜನರನ್ನು ನೇಮಿಸು. ನಿನಗೆ ಸರಿಯಾದ ಸಮಾಚಾರ ಅವರು ತಿಳಿಸುವವರಾಗಲಿ. ಅಲ್ಲಾಹನು ನಿನಗೆ ಜಯ ನೀಡುವವನಾಗಲಿ. ಬೇಗ ಮರಳಿ ಬಾ ಎಂದು ಹೇಳಿದರು. ಆ ಸಮಯದಲ್ಲಿ ಹಝ್ರತ್ ಉಸಾಮರ ಪ್ರಾಯ 17ರಿಂದ 20 ವರ್ಷ ಎಂದು ಅಂದಾಜಿಸಲಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಸಾಮರಿಗೆ ಒಂದು ಪತಾಕೆಯನ್ನು ಕೊಟ್ಟು ಹೇಳಿದರು: ಅಲ್ಲಾಹನ ನಾಮದೊಂದಿಗೆ ಅವನ ಮಾರ್ಗದಲ್ಲಿ ಜಿಹಾದ್ ಮಾಡು. ಅಲ್ಲಾಹನನ್ನು ನಿರಾಕರಿಸುವವರೊಂದಿಗೆ ಯುದ್ಧ ಮಾಡು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಯಿಲೆ ವರ್ಧಿಸಿತು. ಆದರೆ ಅವರು ಒತ್ತಿ ಹೇಳುತ್ತಿದ್ದರು. ಉಸಾಮನ ನೇತೃತ್ವದ ಸೈನ್ಯವನ್ನು ಕಳುಹಿಸಿರಿ ಎಂದು. ಸೋಮವಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ರೋಗೋಪಶಮನವಾಯಿತು. ಅವರು ಹಝ್ರತ್ ಉಸಾಮರೊಂದಿಗೆ ಹೇಳಿದರು: ಅಲ್ಲಾಹನ ಅನುಗ್ರಹದಿಂದ ಯುದ್ಧಕ್ಕೆ ಹೊರಡು. ಹಝ್ರತ್ ಉಸಾಮ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಯಿಂದ ಹೊರಟು ಹೋದಾಗ ಅವರ ತಾಯಿ ಹಝ್ರತ್ ಉಮ್ಮು ಐಮನ್ ಒಬ್ಬ ವ್ಯಕ್ತಿಯ ಮೂಲಕ ಹೀಗೆ ಸಂದೇಶ ಕಳುಹಿಸಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣಾಸನ್ನ ಸ್ಥಿತಿಯಲ್ಲಿರುವರು. ಅವರ ಸ್ಥಿತಿ ಬಹಳ ಕೆಟ್ಟು ಹೋಗಿದೆ. ಈ ದುಃಖದಾಯಕ ವಾರ್ತೆ ಆಲಿಸಿದ ಕೂಡಲೆ ಹಝ್ರತ್ ಉಸಾಮ ಹಝ್ರತ್ ಉಮರ್ ಮತ್ತು ಹಝ್ರತ್ ಅಬೂ ಉಬೈದರರೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಮರಳಿ ಹೋದಾಗ ಅವರು ಮರಣಾಸನ್ನ ಸ್ಥಿತಿಯಲ್ಲಿದ್ದರು. ರಬೀಉಲ್ ಅವ್ವಲ್ ದಿನಾಂಕ 12ರಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿಧನ ಹೊಂದಿದರು. ಆ ಕಾರಣದಿಂದ ಮುಸ್ಲಿಮ್ ಸೈನ್ಯ ಜರಫ್ ಎಂಬ ಸ್ಥಳದಿಂದ ಮರಳಿತು. ಹಝ್ರತ್ ಬರೀದ ಹಝ್ರತ್ ಉಸಾಮರ ಪತಾಕೆಯನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಯ ಬಾಗಿಲ ಮುಂದೆ ಹಾರಿಸಿದರು. ಹಝ್ರತ್ ಅಬೂಬಕರ್(ರ) ಖಲೀಫರಾಗಿ ಬೈಅತ್ ಪಡೆದ ನಂತರ ಅವರು ಹಝ್ರತ್ ಬರೀದರಿಗೆ ಆಜ್ಞಾಪಿಸಿದರು, ಪತಾಕೆಯನ್ನು ತೆಗೆದುಕೊಂಡು ಉಸಾಮರ ಮನೆಗೆ ಹೋಗಿರಿ. ಅವರು ತಮ್ಮ ಉದ್ದೇಶಲಕ್ಷ್ಯಕ್ಕೋಸ್ಕರ ಹೊರಡಲಿ. ಹಝ್ರತ್ ಬರೀದ ಪತಾಕೆಯನ್ನು ಸೈನ್ಯವು ಮೊದಲಿದ್ದ ಸ್ಥಳಕ್ಕೆ ತೆಗೆದುಕೊಂಡು ಹೋದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಅರಬ್ ದೇಶದಲ್ಲಿ ಗಲಬೆ ಗೊಂದಲಗಳು ಹಬ್ಬಿತ್ತು. ಸಹಾಬರು ಹಝ್ರತ್ ಅಬೂಬಕರ್‌ರೊಂದಿಗೆ ವಿನಂತಿಸಿದರು: ದೇಶದ ವಿಷಮ ಪರಿಸ್ಥಿತಿಯ ಕಾರಣ ಉಸಾಮರ ಸೈನ್ಯವನ್ನು ರವಾನಿಸುವುದನ್ನು ಮುಂದೂಡಿರಿ ಎಂದು. ಆದರೆ ಹಝ್ರತ್ ಅಬೂಬಕರ್ ಸಮ್ಮತಿಸಲಿಲ್ಲ. ಅವರು ಹೇಳಿದರು: ಕಾಡುಮೃಗಗಳು ನನ್ನನ್ನು ಎಳೆದಾಡುತ್ತಾ ಹೋದರೂ ನಾನು ಈ ಸೈನ್ಯವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೀರ್ಮಾನ ಪ್ರಕಾರ ಕಳುಹಿಸುವೆನು. ಸೈನ್ಯ ಹೊರಡಲು ಸಿದ್ಧವಾಯಿತು. ಆಗ ಕೆಲವು ಸಹಾಬರು ಪುನಃ ಸಲಹೆ ನೀಡಿದರು. ಸೈನ್ಯವನ್ನು ರವಾನಿಸುವುದನ್ನು ತಡೆಗಟ್ಟಿರಿ ಎಂದು. ಕೆಲವು ವರದಿಗಳ ಪ್ರಕಾರ ಕೆಲವು ಅನ್‌ಸಾರ್ ಸಹಾಬರು ಹಝ್ರತ್ ಉಮರ್(ರ)ರೊಂದಿಗೆ ಹೇಳಿದರು: ಖಲೀಫರೊಡನೆ ವಿನಂತಿಸಿರಿ, ಅವರು ಸೈನ್ಯವನ್ನು ರವಾನಿಸುವ ಬಗ್ಗೆ ದೃಢನಿರ್ಧಾರವನ್ನೇ ಹೊಂದಿದ್ದರೆ ಅವರು ಸೇನಾಧಿಪತಿಯಾಗಿ ಉಸಾಮನಿಗಿಂತ ಹೆಚ್ಚು ಪ್ರಾಯದ ಯಾರನ್ನಾದರೂ ನೇಮಿಸಲಿ ಎಂದು. ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರ ಬಳಿಗೆ ಹೋಗಿ ಈ ವಿಷಯ ಹೇಳಿದಾಗ ಅವರು ದೃಢನಿರ್ಧಾರದೊಂದಿಗೆ ಪುನಃ ಹೇಳಿದರು: ಕಾಡಿನ ಮೃಗಗಳು ಮದೀನವನ್ನು ಪ್ರವೇಶಿಸಿ ನನ್ನನ್ನು ಎತ್ತಿಕೊಂಡು ಹೋದರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞಾಪಿಸಿದ ಕೆಲಸವನ್ನು ನಾನು ತಡೆಗಟ್ಟಲಾರೆ. ಹಝ್ರತ್ ಅಬೂಬಕರ್ ಹೇಳಿದ ಖಂಡಿತ ನಿರ್ಧಾರವನ್ನು ಆಲಿಸಿ ಹಝ್ರತ್ ಉಮರ್ ಸೈನ್ಯದ ಬಳಿಗೆ ತಲಪಿದಾಗ ಜನರು ಕೇಳಿದರು, ಏನಾಯಿತು? ಆಗ ಹಝ್ರತ್ ಉಮರ್ ಕೋಪದಿಂದ ಹೇಳಿದರು: ನನ್ನ ಬಳಿಯಿಂದ ಹೊರಟು ಹೋಗಿರಿ. ನಿಮ್ಮ ಕಾರಣದಿಂದ ಈ ದಿನ ನಾನು ಖಲೀಫರಿಂದ ಅತೃಪ್ತಿಯ ಮಾತುಗಳನ್ನು ಆಲಿಸಬೇಕಾಯಿತು.

ಹಝ್ರತ್ ಅಬೂಬಕರ್‌ರವರ ಆಜ್ಞೆ ಪ್ರಕಾರ ಉಸಾಮರ ಸೈನ್ಯ ಜರಫ್ ಎಂಬಲ್ಲಿ ಜಮಾಯಿಸಿದಾಗ ಹಝ್ರತ್ ಅಬೂಬಕರ್ ಸ್ವತಃ ಅಲ್ಲಿಗೆ ಹೋಗಿ ಸೈನ್ಯವನ್ನು ಪರಿಶೋಧಿಸಿದರು ಮತ್ತು ಅದನ್ನು ಸುವ್ಯವಸ್ಥೆಗೊಳಿಸಿದರು. ಆಗ ಹಝ್ರತ್ ಉಸಾಮ ಸವಾರಿ ಮಾಡುತ್ತಿದ್ದರು ಮತ್ತು ಹಝ್ರತ್ ಅಬೂಬಕರ್ ಪಾದಾಚಾರಿಯಾಗಿದ್ದರು. ಹಝ್ರತ್ ಉಸಾಮ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಲೀಫರೇ, ಒಂದೋ ತಾವು ಸವಾರಿ ಮಾಡಿರಿ ಅಥವಾ ನನಗೆ ಕೆಳಗಿಳಿಯಲು ಅನುಮತಿಸಿರಿ. ಹಝ್ರತ್ ಅಬೂಬಕರ್ ಹೇಳಿದರು: ಅಲ್ಲಾಹನಾಣೆ! ನೀನು ಕೆಳಗಿಳಿಯುವುದು ಬೇಡ ನಾನು ಸವಾರಿ ಮಾಡಲಾರೆ. ಅಲ್ಲಾಹನಿಗೋಸ್ಕರ ನನ್ನ ಎರಡು ಪಾದಗಳನ್ನು ಕೊಳೆ ಮಾಡದಿರಲು ನನಗೇನಾಗಿದೆ. ಯುದ್ಧ ಮಾಡಲು ಹೊರಟವನು ಒಂದು ಹೆಜ್ಜೆ ಹಾಕಿದಾಗ ಅದಕ್ಕೆ ಪ್ರತಿಫಲವಾಗಿ ಏಳುನೂರು ಒಳಿತುಗಳನ್ನು ಅವನಿಗೆ ಬರೆಯಲಾಗುತ್ತದೆ. ಅವನಿಗೆ ಏಳುನೂರು ಪದವಿಗಳ ಉನ್ನತಿ ದೊರಕುತ್ತದೆ. ಅವನ ಏಳುನೂರು ಕೆಡುಕುಗಳು ನಿವಾರಿಸಲ್ಪಡುತ್ತವೆ. ಈ ಘಟನೆಯ ನಂತರ ಹಝ್ರತ್ ಉಮರ್(ರ) ಹಝ್ರತ್ ಉಸಾಮರನ್ನು ಭೇಟಿಯಾಗುವಾಗ ಹೇಳುತ್ತಿದ್ದರು, **ಅಸ್ಸಲಾಮು ಅಲೈಕ ಅಯ್ಯುಹಲ್ ಅಮೀರ್**. ಆಗ ಹಝ್ರತ್ ಉಸಾಮ ಹೇಳುತ್ತಿದ್ದರು: **ಗಫರಲ್ಲಾಹು ಲಕ ಯಾ ಅಮೀರುಲ್ ಮೂಮಿನೀನ್.** ಓ ಅಮೀರುಲ್ ಮೂಮಿನೀನ್ ಅಲ್ಲಾಹನು ತಮ್ಮನ್ನು ಕ್ಷಮಿಸಲಿ.

ಹಝ್ರತ್ ಅಬೂಬಕರ್ ಹಝ್ರತ್ ಉಸಾಮರ ಸೈನ್ಯಕ್ಕೆ ಹೀಗೆ ಉಪದೇಶಿಸಿದ್ದರು: ನೀವು ವಿಶ್ವಾಸ ವಂಚನೆ ಮಾಡಬೇಡಿರಿ. ನೀವು ಪ್ರತಿಜ್ಞೆ ಉಲ್ಲಂಘಿಸಬೇಡಿರಿ. ಕಳ್ಳತನ ಮಾಡಬೇಡಿರಿ. ಅಂಗವಿಚ್ಛೇಧನೆ ಮಾಡಬೇಡಿರಿ. ಚಿಕ್ಕ ಮಕ್ಕಳನ್ನೂ ವೃದ್ಧರನ್ನೂ ಕೊಲ್ಲಬಾರದು. ಮಹಿಳೆಯರನ್ನು ಕೊಲ್ಲಬಾರದು. ಖರ್ಜೂರದ ಮರಗಳನ್ನು ಕಡಿಯಬಾರದು ಅಥವಾ ಸುಡಬಾರದು. ಆಡು ಕುರಿ ಒಂಟೆಗಳನ್ನು ಆಹಾರಕ್ಕೋಸ್ಕರ ಹೊರತು ಕೊಲ್ಲಬಾರದು. ಇಗರ್ಜಿಗಳಲ್ಲಿ ಆರಾಧಿಸಲು ತಮ್ಮನ್ನು ಅರ್ಪಿಸಿಕೊಂಡವರನ್ನು ಕೊಲ್ಲಬಾರದು. ಬಟ್ಟಲುಗಳಲ್ಲಿ ವಿವಿಧ ಆಹಾರ ಪದಾರ್ಥಗಳನ್ನು ತರುವವರನ್ನು ನೀವು ಕಂಡರೆ ನೀವು ಬಿಸ್ಮಿಲ್ಲಾ ಹೇಳಿ ಅವುಗಳನ್ನು ತಿನ್ನಿರಿ. ತಲೆಯ ಮಧ್ಯಭಾಗ ಬೋಳಿಸಿ ಸುತ್ತಲೂ ಕೂದಲು ಉದ್ದವಾಗಿ ಬೆಳೆಸಿರುವವರನ್ನು ಸಹ ನೀವು ಭೇಟಿಯಾಗುವಿರಿ. ಅವರನ್ನು ಖಡ್ಗದಿಂದ ಸ್ವಲ್ಪ ಗಾಯಗೊಳಿಸಿ ನಿಮ್ಮನ್ನು

ರಕ್ಷಿಸಿಕೊಳ್ಳಿರಿ. ಅಲ್ಲಾಹನು ನಿಮ್ಮನ್ನು ಸಾಂಕ್ರಾಮಿಕ ರೋಗ ಮತ್ತು ಪ್ಲೇಗಿನ ಹಾವಳಿಯಿಂದ ರಕ್ಷಿಸಲಿ.

ಹಿಜರಿ ವರ್ಷ 11 ರಬೀಉಲ್ ಆಖಿರ್ ದಿನಾಂಕ ಒಂದರಂದು ಹಝ್ರತ್ ಉಸಾಮ ತನ್ನ ಸೈನ್ಯದೊಂದಿಗೆ ಮದೀನದಿಂದ ಹೊರಟು ವಿವಿಧ ತಂಗುದಾಣಗಳನ್ನು ದಾಟುತ್ತಾ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಸಿಯ್ಯತ್ ಪ್ರಕಾರ ಸಿರಿಯಾದ ಅಬ್‌ನಾ ಎಂಬಲ್ಲಿಗೆ ತಲಪಿದರು. ಮುಂಜಾನೆ ಆ ಪಟ್ಟಣವನ್ನು ನಾಲ್ಕು ದಿಕ್ಕುಗಳಿಂದಲೂ ಆಕ್ರಮಿಸಿದರು. ಈ ಯುದ್ಧದಲ್ಲಿ ಮುಸ್ಲಿಮ್ ಮುಜಾಹಿದರೊಂದಿಗೆ ಹೋರಾಡಿದವರು ಕೊಲ್ಲಲ್ಪಟ್ಟರು. ಅನೇಕರು ಸೆರೆ ಹಿಡಿಯಲ್ಪಟ್ಟರು. ಬಹಳ ಸಂಪತ್ತು ಮುಸ್ಲಿಮರ ವಶವಾಯಿತು. ಅದರಿಂದ ಐದನೆಯ ಒಂದು ಭಾಗ ಉಳಿಸಿ ಉಳಿದ ಎಲ್ಲವನ್ನೂ ಸೈನಿಕರಿಗೆ ಹಂಚಿದರು. ಸೈನ್ಯ ಒಂದು ದಿನ ಅಲ್ಲಿ ತಂಗಿ ಮರುದಿನ ಮದೀನಕ್ಕೆ ಮರಳಿತು.

ಈ ಜಯಶಾಲಿ ಸೈನ್ಯ ಮದೀನಕ್ಕೆ ಸಮೀಪಿಸುತ್ತಿದ್ದಾಗ ಹಝ್ರತ್ ಅಬೂಬಕರ್ ಮುಹಾಜಿರ್ ಮತ್ತು ಅನ್‌ಸಾರ್‌ಗಳ ಜೊತೆ ಸೇರಿ ಸೈನ್ಯವನ್ನು ಸ್ವಾಗತಿಸಲು ಮದೀನದ ಹೊರಗೆ ಜಮಾಯಿಸಿದ್ದರು. ಸೈನ್ಯ ಮದೀನವನ್ನು ಪ್ರವೇಶಿಸಿ ಮಸ್‌ಜಿದ್ ನಬವಿ ತನಕ ತಲಪಿತು. ಹಝ್ರತ್ ಉಸಾಮ ಮಸ್‌ಜಿದನ್ನು ಪ್ರವೇಶಿಸಿ ಎರಡು ರಕಅತ್ ನಫ್ಲ್ ನಮಾಝ್ ನಿರ್ವಹಿಸಿ ಮನೆಗೆ ತೆರಳಿದರು.

ಉಸಾಮರ ಸೈನ್ಯವನ್ನು ಕಳುಹಿಸಿದುದು ಮುಸ್ಲಿಮರಿಗೆ ಬಹಳ ಲಾಭದಾಯಕವಾಯಿತು. ಅರಬ್ ದೇಶದ ನಿವಾಸಿಗಳು ಹೇಳಿದರು: ಮುಸ್ಲಿಮರಲ್ಲಿ ಶಕ್ತಿ ಇಲ್ಲದಿರುತ್ತಿದ್ದರೆ ಅವರು ಸೈನ್ಯವನ್ನು ಕಳುಹಿಸುತ್ತಿರಲಿಲ್ಲ. ಅದೇ ರೀತಿ ಮುಸ್ಲಿಮರ ವಿರುದ್ಧ ಅವಿಶ್ವಾಸಿಗಳು ಹೇಳಲು ಉದ್ದೇಶಿಸಿದ್ದ ಅನೇಕ ಮಾತುಗಳನ್ನು ಅವರಿಗೆ ಹೇಳಲು ಸಾಧ್ಯವಾಗಲಿಲ್ಲ. ನಮ್ಮ ಯಜಮಾನರಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪ್ರಿಯರಾಗಿದ್ದ ಹಝ್ರತ್ ಝೈದ್ ಬಿನ್ ಹಾರಿಸ ಮತ್ತು ಅವರ ಪುತ್ರ ಹಝ್ರತ್ ಉಸಾಮ ಬಿನ್ ಝೈದ್‌ರಿಗೆ ಅಲ್ಲಾಹನು ಸಾವಿರಾರು ಕಾರುಣ್ಯಗಳನ್ನೂ ಅನುಗ್ರಹಗಳನ್ನೂ ಸುರಿಸಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್ ಐವರಿಕೋಸ್ಟ್ ದೇಶದ ಮುಕರ್ರಮ್ ಸಿದ್ದೀಖ್ ಆದಮ್ ಸಾಹಿಬ್ ಮತ್ತು ಪಾಕಿಸ್ಥಾನ ಒಕಾಡದ ಮುಕರ್ರಮ್ ಗುಲಾಮ್ ಮುಸ್ತಫಾ ಸಾಹಿಬರ ಸದ್ಗುಣಗಳನ್ನು ವಿವರಿಸಿ ಜುಮುಅ ನಮಾಝ್ ನಂತರ ಅವರಿಬ್ಬರ ನಮಾಝೆ ಜನಾಝ ಗಾಯಿಬ್ ನಿರ್ವಹಿಸಿದರು.)

*****

*Friday Sermon delivered by Hadrath Khaleefatul Masih Al Khamis(atba)*
*At, Masjid Mubarak, Islamabad, London, UK, On 28-06-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon